ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 04 ಇಜಿಯು 2018

ನಿರ್ದೇಶಕರವರ ಕಛೇರಿ,
ಅರಮನೆ ರಸ್ತೆ,
ಬೆಂಗಳೂರು-560 001.
ದಿನಾಂಕ:27-11-2018.

## ಸುತ್ತೋಲೆ

ವಿಷಯ: ಕನ್ನಡದಲ್ಲಿ ಅಂತರ್ಜಾಲ ತಾಣವನ್ನು ಸೃಜಿಸುವ ಬಗ್ಗೆ.
ಉಲ್ಲೇಖ: 1.ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಪತ್ರ ಸಂಖ್ಯೆ ಕಅಪ್ರಾ/ಅ/1007/2018 ದಿನಾಂಕ: 05/11/2018
2.ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಪತ್ರ ಸಂಖ್ಯೆ ಕಅಪ್ರಾ/ಅ/1023/2018 ದಿನಾಂಕ: 19/11/2018

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರರ ಪತ್ರದಲ್ಲಿ ತಿಳಿಸಿರುವಂತೆ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಅಧಿಕೃತ ಅಂತರ್ಜಾಲತಾಣಗಳು ಕನ್ನಡದಲ್ಲಿ ಇರಬೇಕೆಂದು ತಿಳಿಸಿರುತ್ತಾರೆ. ಆದ್ದರಿಂದ ತಕ್ಷಣವೇ ಎಲ್ಲಾ ಪ್ರಾಂಶುಪಾಲರು ತಮ್ಮ ತಮ್ಮ ಸಂಸ್ಥೆಯ ಅಂತರ್ಜಾಲ ತಾಣಗಳನ್ನು ಹೊಸದಾಗಿ ಸೃಜಿಸಲು ಕ್ರಮ ಕೈಗೊಂಡು, ಮುಖಪುಟ ಹಾಗೂ ಒಳ ಮಾಹಿತಿಗಳನ್ನು ಕನ್ನಡದಲ್ಲಿಯೇ ಸೃಜಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ. ದಿನಾಂಕ 27-11-2018 ರೊಳಗೆ ಅಂತರ್ಜಾಲ ತಾಣಗಳನ್ನು ಸೃಜಿಸಿ, ಹೊಸ್ಟ್ ಮಾಡಿ, ಹೋಸ್ಟ್ ಮಾಡಿರುವ ಬಗ್ಗೆ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಬೇಕೆಂದು ಇದೇ ಸಮಸಂಖ್ಯೆಯ ಸುತ್ತೋಲೆ ದಿನಾಂಕ 17-11-2018 ರಲ್ಲಿ ಸೂಚಿಸಲಾಗಿತ್ತು. ಆದ್ದರಿಂದ ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರೂ ಕೂಡಲೇ ಅಂತರ್ಜಾಲ ತಾಣಗಳನ್ನು ಕನ್ನಡದಲ್ಲಿ ಸೃಜಿಸಿ ಹೊಸ್ಟ್ ಮಾಡಲು ಕ್ರಮ ತೆಗೆದುಕೊಂಡು, ಹೋಸ್ಟ್ ಮಾಡಿರುವ ಬಗ್ಗೆ ನಿರ್ದೇಶನಾಲಯಕ್ಕೆ ತಕ್ಷಣವೇ ವರದಿ ಸಲ್ಲಿಸಬೇಕೆಂದು ಸೂಚಿಸಲಾಗಿದೆ.

ನಿರ್ದೇಶಕರು

27/11/18

ಇವರಿಗೆ,

1. ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
2. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.

**ಪ್ರೊ. ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಚೇರಿ: ಕೊಠಡಿ ಸಂಖ್ಯೆ ೨೦೬
೨ನೇ ಮಹಡಿ, ವಿಧಾನಸೌಧ
ಬೆಂಗಳೂರು–೫೬೦ ೦೦೧
ದೂರವಾಣಿ: ೦೮೦–೨೨೨೫೬೩೬೫
೨೨೦೩೩೫೧೯
ಸಂಚಾರವಾಣಿ–೯೪೪೮೯೪೯೭೩೭

ಸಂಖ್ಯೆ : ಕಅಪ್ರಾ/ಅ/ 1023 /೨೦೧೮

ದಿನಾಂಕ: ೧೯.೧೧.೨೦೧೮.

**ಮಾನ್ಯರೆ,**

**ದಿನಾಂಕ: ೧೪.೧೧.೨೦೧೮ ರಂದು ತಾವು ಬರೆದ ಪತ್ರವನ್ನು ಗಮನಿಸಲಾಗಿದೆ.** ಈ ಸಂಬಂಧ ತಮ್ಮೊಡನೆ ದೂರವಾಣಿಯಲ್ಲಿ ಚರ್ಚಿಸಿದಂತೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಡಿ ೮೨ ಸರ್ಕಾರಿ, ೪೪ ಅನುದಾನಿತ ಮತ್ತು ೧೭೦ ಖಾಸಗಿ ಪಾಲಿಟೆಕ್ನಿಕ್‌ಗಳು, ೧೧ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ೯ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಅಸ್ತಿತ್ವದಲ್ಲಿದ್ದು, ಸದರಿ ಶಿಕ್ಷಣ ಸಂಸ್ಥೆಗಳ **ಅಂತರ್ಜಾಲ ತಾಣದ ಮುಖಪುಟ (ಡಿಫಾಲ್ಟ್ ಪೇಜ್) ಹಾಗೂ ಎಲ್ಲಾ ಒಳ ಮಾಹಿತಿಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ನೀಡುವ ಬಗ್ಗೆ ಕೂಡಲೇ ಅಗತ್ಯಕ್ರಮವಹಿಸಿ ಕೈಗೊಂಡ ಕ್ರಮದ ಕುರಿತು ೭ ದಿನಗಳ ಒಳಗಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಕ್ತ ದಾಖಲೆಯೊಂದಿಗೆ ವರದಿಯನ್ನು ಸಲ್ಲಿಸಲು ತಿಳಿಸಿದೆ.**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**(ಪ್ರೊ. ಎಸ್. ಜಿ. ಸಿದ್ಧರಾಮಯ್ಯ)**

**ಗೆ,**
**ಶ್ರೀ ಹೆಚ್.ಯು. ತಳವಾರ್,**
**ನಿರ್ದೇಶಕರು,**
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ತಾಂತ್ರಿಕ ಭವನ, ಅರಮನೆ ರಸ್ತೆ, ಬೆಂಗಳೂರು.